ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಕಡತ ಸಂಖ್ಯೆ:. ಸಿ7(7)ಪ್ರಾಶಿಅ/ಇತರೆ/14 /2018-19 ದಿನಾಂಕ:29-07-2019

**: : ಜ್ಞಾಪನಾ : :**

ವಿಷಯ: ದಾಖಲಾತಿ ಕೊರತೆಯಿಂದ ಮುಚ್ಚಲ್ಪಡುವ ಅನುದಾನಿತ ಶಾಲೆಗಳನ್ನು ಕಾರ್ಯಸಾಧು -ವಲ್ಲದ ಶಾಲೆಗಳೆಂದು ಪರಿಗಣಿಸಿ, ಕರ್ತವ್ಯ ನಿರತ ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ಅಗತ್ಯವಿರುವ ಅನುದಾನಿತ ಶಾಲೆಗಳಿಗೆ ಮರುಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಿಬ್ಬಂದಿಯ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಗಳು-1999 ರ ನಿಯಮ 13.

2. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮಂಡ್ಯ ಜಿಲ್ಲೆ, ಮಂಡ್ಯ ಇವರ ಕಛೇರಿ ಪತ್ರದ ಸಂಖ್ಯೆ:ಜಿ29ಅ2)4624.ಅನುಮತಿ.ರದು.33/ 13-14, ದಿನಾಂಕ:17-06-2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ[2]ರ ಪತ್ರದಂತೆ ಏಡೆಡ್ ಮಿಷನ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಬಾಚನಹಳ್ಳಿ, ಮಳವಳ್ಳಿ ತಾಲ್ಲೂಕು ಈ ಶಾಲೆಯಲ್ಲಿ ಕನಿಷ್ಟ ದಾಖಲಾತಿ/ಹಾಜರಾತಿ ಕೊರತೆಯಿಂದ ಶಾಲೆಯು ಶೂನ್ಯ ದಾಖಲಾತಿಯಾಗಿರುವ ಕಾರಣ ಮಾನ್ಯತೆ ಹಿಂಪಡೆದು ಕರ್ತವ್ಯನಿರ್ವಹಿಸುತ್ತಿರುವ ಕರ್ತವ್ಯ ನಿರತ ಶಿಕ್ಷಕರನ್ನು ಕಾರ್ಯಭಾರವಿರುವ ಶಾಲೆಗಳಿಗೆ ಮರುಹಂಚಿಕೆ ಮಾಡುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಕೆಲವು ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಇವರು ಭೇಟಿ ನೀಡಿ ವರದಿ ನೀಡಿರುವಂತೆ ಕೆಲವೊಂದು ಅನುದಾನಿತ ಶಾಲೆಗಳಲ್ಲಿ ಕನಿಷ್ಟ ನಿಗಧಿತ ಪ್ರಮಾಣದ ವಿದ್ಯಾರ್ಥಿಗಳು ಇದ್ದು, ಹಾಜರಾತಿಯು ಕುಂಠಿತಗೊಂಡಿರುತ್ತದೆ. ಮೂಲಭೂತ ಸೌಕರ್ಯ ಇಲ್ಲದೇ ಇರುವ ಕಾರಣ ಕೆಲವೊಂದು ಅನುದಾನಿತ ಶಾಲೆಗಳ ಮಾನ್ಯತೆ ನವೀಕರಣಗೊಂಡಿರುವುದಿಲ್ಲ. ಇಂತಹ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಿ, ಶಾಲಾ ಅನುದಾನವನ್ನು ಹಿಂಪಡೆಯಬಹುದಾಗಿದೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಬೇರೊಂದು ಅನುದಾನಿತ ಶಾಲೆಗೆ ವರ್ಗಾವಣೆ ಮಾಡಬಹುದೆಂದು ಅಭಿಪ್ರಾಯಿಸಿರುತ್ತಾರೆ ಹಾಗೂ ಶೂನ್ಯ ಶಾಲೆಯಾದಲ್ಲಿ ಅನುದಾನಸಹಿತವಾಗಿ ಅನುಮೋದನೆಗೊಂಡು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಬೇರೊಂದು ಅನುದಾನಿತ ಶಾಲೆಗೆ ಹುದ್ದೆ ಸಹಿತ ಸ್ಥಳಾಂತರ ಮಾಡುವ ಬಗ್ಗೆ ಸೂಕ್ತ ಆದೇಶ ನೀಡುವಂತೆ ಉಪನಿರ್ದೇಶಕರುಗಳು ಕೋರಿರುತ್ತಾರೆ.

ಉಲ್ಲೇಖ [1] ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಿಬ್ಬಂದಿಯ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಗಳು-1999 ನಿಯಮ 13 ರ ಪ್ರಕಾರ ದಾಖಲಾತಿ ಕೊರತೆ ಇರುವ ಶಾಲೆಗಳು / ಶೂನ್ಯ ಶಾಲೆಗಳನ್ನು ಕಾರ್ಯಸಾಧುವಲ್ಲದ ಶಾಲೆಗಳೆಂದು ಪರಿಗಣಿಸಿ

ಅಲ್ಲಿಯ ಮಕ್ಕಳನ್ನು ಬೇರೆ ಶಾಲೆಗಳಿಗೆ ದಾಖಲುಪಡಿಸಿ, ಸದರಿ ಶಾಲೆಗಳನ್ನು 2019–20ನೇ ಶೈಕ್ಷಣಿಕ ಸಾಲಿನಿಂದ ಮುಚ್ಚಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದೆ. ಪ್ರಸ್ತುತ ಈ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಮತ್ತೊಮ್ಮೆ ಇಂತಹ ಪ್ರಕರಣಗಳು ಮರುಕಳಿಸದಂತೆ ಅನುಮೋದನೆಯಾದ ಬೋಧನಾ ವಿಷಯಕ್ಕೆ ಅನುಗುಣವಾಗಿ ದಾಖಲಾತಿ /ಹಾಜರಾತಿ ಹೆಚ್ಚಾಗಿರುವ ಅನುದಾನಿತ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಮರುಹಂಚಿಕೆ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ. ಅನುದಾನಿತ ಶಾಲೆಗಳ ಬಗ್ಗೆ ನ್ಯಾಯಾಲಯ, ಸರ್ಕಾರ, ಆಯುಕ್ತಾಲಯದಲ್ಲಿ ಯಾವುದಾದರೂ ದೂರು / ದಾವೆಗಳು / ಪ್ರಕರಣಗಳು ಇದ್ದಲ್ಲಿ ಅಂತಹ ಶಾಲೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆಯುಕ್ತಾಲಯದಿಂದ ಕಡ್ಡಾಯವಾಗಿ ಅನುಮತಿ ಪಡೆದ ನಂತರದಲ್ಲಿ ಮುಂದಿನ ಕ್ರಮ ವಹಿಸುವುದು.

[ಎಂ.ಪಿ.ಮಾದೇಗೌಡ]
ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

ರವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.